ಹಿಂದಿಯ ಸಮಕಾಲೀನ ಲೇಖಕರಲ್ಲಿ ಸೈಯದ್ ಅಸಘರ್ ವಜಾಹತ್ (1946) ಒಬ್ಬರು. ಕತೆ, ಕಾದಂಬರಿ, ಪ್ರವಾಸ ಕಥನಗಳನ್ನು ಬರೆದಿದ್ದಾರೆ. ಸಿನಿಮಾಕ್ಕೆ ಚಿತ್ರಕಥೆ ಬರೆದಿದ್ದಾರೆ. ಉರ್ದು ಗಜಲುಗಳ ಮೇಲೆ ಸಾಕ್ಷ್ಯಚಿತ್ರ ನಿರ್ಮಿಸಿದ್ದಾರೆ. ಇವರ 'ಜಿಸ್ ಲಾಹೋರ್ ನೈ ದೇಖ್ಯಾ ವೊ ಜಾಮಿಯಾ ನೈ' ನಾಟಕವು ಕನ್ನಡದಲ್ಲಿ 'ರಾವಿ ನದಿಯ ದಂಡೆಯ ಮೇಲೆ' (ಕನ್ನಡಕ್ಕೆ: ಇಟಗಿ ಈರಣ್ಣ) ಹೆಸರಲ್ಲಿ ಅನುವಾದಗೊಂಡಿದೆ. ನೂರಾರು ಪ್ರದರ್ಶನ ಕಂಡಿದೆ. ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ಹಿಂದಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ವಜಾಹತ್, ಇತ್ತೀಚೆಗೆ ಧಾರವಾಡದಲ್ಲಿ ನಡೆದ ಲೇಖಕ ಹಸನ್ ನಯೀಮ ಸುರಕೋಡರ ಅಭಿನಂದನೆ ಕಾರ್ಯಕ್ರಮಕ್ಕೆ ಬಂದಿದ್ದರು. ಆಗ ಅವರ ಜತೆ ನಡೆಸಿದ ಸಂವಾದ ಇದು.

---

- ತಾವು ಉರ್ದು–ಹಿಂದಿ ಭಾಷೆಗಳ ವಿದ್ವಾಂಸರು. ಈ ಎರಡು ಭಾಷೆಗಳು ಕಲ್ಪಿತವೊ ವಾಸ್ತವವೊ?

ಎರಡೂ ಬೇರೆ ಭಾಷೆಗಳಲ್ಲ. ಇವುಗಳ ವ್ಯಾಕರಣ ಒಂದೇ. ಶಬ್ದಕೋಶ ಮತ್ತು ಪ್ರೇರಣೆಯ ಮೂಲ ಕೊಂಚ ಬೇರೆಯಿವೆ. ಉರ್ದುವಿನ ಪ್ರೇರಣಾಮೂಲ ಫಾರಸಿಯಲ್ಲಿದ್ದರೆ, ಹಿಂದಿಯದು ಸ್ವಲ್ಪ ಸಂಸ್ಕೃತದಲ್ಲಿದೆ. ಅದಕ್ಕಿಂತ ಹೆಚ್ಚಿನದು ಜಾನಪದದಲ್ಲಿದೆ. ಸ್ವಾರಸ್ಯಕರವೆಂದರೆ, ಭಾಷಾವಿಜ್ಞಾನಿಗಳ ಪ್ರಕಾರ ಎರಡೂ ಭಾಷೆಗಳು ಒಂದೇ. ಆದರೆ ನಮ್ಮ ಸಂವಿಧಾನ ಇವನ್ನು ಬೇರೆಬೇರೆ ಎನ್ನುತ್ತದೆ.

1947ರ ಬಳಿಕ ಉರ್ದುವಿನಲ್ಲಿ ಬರೆಯುತ್ತಿದ್ದವರೆಲ್ಲ ಹಿಂದಿಗೆ ಹೊರಳಿಕೊಳ್ಳುವ ಒತ್ತಡ ಬಂದಿತು. ಉದಾಹರಣೆಗೆ ಕೃಷ್ಣಚಂದರ್.

1947ರ ಮೊದಲು ಬಹುತೇಕರು ಉರ್ದು ಲಿಪಿಯಲ್ಲೇ ಬರೆಯುತ್ತಿದ್ದರು. 1947ರ ಬಳಿಕ ಉರ್ದು ಒಂದು ಬಗೆಯಲ್ಲಿ ನಿಷೇಧಿತವಾಯಿತು. ಹಿಂದಿಯನ್ನು ಮುಂಚೂಣಿಗೆ ತರಲಾಯಿತು. ಅನೇಕ ಉರ್ದು ಮನೆಮಾತಿನ ಮುಸ್ಲಿಮರು ಕೂಡ ದೇವನಾಗರಿ ಲಿಪಿಯಲ್ಲಿ ಬರೆಯತೊಡಗಿದರು.

- ಬಳಸುವ ಲಿಪಿ ದೇವನಾಗರಿಯಾದರೂ ಬರೆಯುವ ಭಾಷೆ ಉರ್ದು ತಾನೇ?

ಉರ್ದು ಹಿಂದಿ ಎರಡೂ ಮಿಶ್ರಣವಾಗಿರುವ ಭಾಷೆ ಅದು.

- ಸದ್ಯ ಉರ್ದುವಿನಲ್ಲಿ ದೊಡ್ಡ ಲೇಖಕ ಯಾರು?

ಶೇರಯಾರ್ ಶ್ರೇಷ್ಠ ಕವಿಯಾಗಿದ್ದರು. ಈಗ ಅವರಿಲ್ಲ. ಸದ್ಯಕ್ಕೆ ಶಂಸುಲ್ ರಹಮಾನ್ ಫಾರೂಕಿ ದೊಡ್ಡ ಹೆಸರು. ಈಗ ಉರ್ದುವಿನ ಮುಖ್ಯ ಕೇಂದ್ರ ಪಾಕಿಸ್ತಾನದಲ್ಲಿದೆ. ಎರಡೂ ದೇಶದ ಉರ್ದು ಲೇಖಕರ ನಡುವೆ ಕೊಡು–ಕೊಳೆಯೂ ಇದೆ.

- ಕರ್ನಾಟಕದಲ್ಲಿ ಕನ್ನಡದಲ್ಲಿ ಬರೆಯುವ ಮುಸ್ಲಿಂ ಲೇಖಕರಲ್ಲಿ ಧಾರ್ಮಿಕ ವಿಮರ್ಶೆ ಹೆಚ್ಚು. ಉರ್ದು ಲೇಖಕರು ಈ ವಿಷಯದಲ್ಲಿ ರಕ್ಷಣಾತ್ಮಕವಾಗಿರುತ್ತಾರೆ. ಈ ಸನ್ನಿವೇಶ ಉತ್ತರ ಭಾರತದಲ್ಲೂ ಇದೆಯಾ?